ಎರಡನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರ ನ್ಯಾಯಾಲಯ ,
ಉಡುಪಿ ಜಿಲ್ಲೆ , ಉಡುಪಿ.

<u>ಸೆಷನ್ಸ್ ಕೇಸ್ ನಂಃ **28/2024**</u> <u>**ಪಿಡಬ್ಲ್ಯು-4**</u>

<u>**ಸಿಡಬ್ಲ್ಯು-19**</u>

| | | |
|---|---|---|
| ಸಾಕ್ಷಿದಾರರ ಹೆಸರು | - | ಚಂದ್ರಶೇಖರ ಜಿ.ಕೆ. |
| ತಂದೆಯ ಹೆಸರು | - | ದೊಡ್ಡೇಗೌಡ |
| ವಯಸ್ಸು | - | 52 ವರ್ಷ |
| ಉದ್ಯೋಗ | - | ಸಹಾಯಕ ಆಡಳಿತ ಅಧಿಕಾರಿ, ನಗರ ಸಶಸ್ತ್ರ ಮೀಸಲು ಪಡೆ, ಬೆಂಗಳೂರು |
| ವಿಳಾಸ | - | ಬೆಂಗಳೂರು. |

ದಿನಾಂಕಃ 08-01-2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಮುಖ್ಯ ವಿಚಾರಣೆಃ ಸರಕಾರಿ ಅಭಿಯೋಜಕರಿಂದಃ</u>

ನಾನು 2020 ರಿಂದ 2025 ನೇ ಜುಲೈವರೆಗೆ ಎಸ್.ಪಿ. ಕಚೇರಿ, ಉಡುಪಿ ಇಲ್ಲಿ ಸಹಾಯಕ ಆಡಳಿತ ಅಧಿಕಾರಿಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ. ದಿನಾಂಕಃ 08-05-2024 ರಂದು ಪ್ರಕರಣದ ತನಿಖಾಧಿಕಾರಿಯ ಕೋರಿಕೆಯಂತೆ ಮೃತ ಜ್ಯೋತಿ ಈಕೆಯ ಎನ್.ಪಿ.ಎಸ್., ಕೆ.ಜಿ.ಐ.ಡಿ.ಗಳಲ್ಲಿರುವ ನಾಮಿನಿ ವಿವರಗಳನ್ನು ಒದಗಿಸುವಂತೆ ಕೋರಿಕೊಂಡಿರುತ್ತಾರೆ. ಅದೇ ಪ್ರಕಾರ ಕಚೇರಿಯಲ್ಲಿ ಲಭ್ಯವಿದ್ದ ಸೇವಾ ಪುಸ್ತಕದಲ್ಲಿರುವ ಆಕೆಯ ನಾಮಿನಿಯ ವಿವರಗಳನ್ನು ಒಂದು ಕವಚ ಪತ್ರದೊಂದಿಗೆ ಹಾಜರುಪಡಿಸಿರುತ್ತೇನೆ. ಕವಚ ಪತ್ರವನ್ನು ಈಗ ನೋಡುತ್ತಿದ್ದು, ಅದನ್ನು ನಿಪಿ-3 ಎಂದು, ಸಾಕ್ಷಿಯ ಸಹಿಯನ್ನು ನಿಪಿ-3(ಎ) ಎಂದು ಗುರುತಿಸಲಾಯಿತು. ನಾಮಿನಿಯ ವಿವರವನ್ನು ನಿಪಿ-4 ಎಂದು ಗುರುತಿಸಲಾಯಿತು.

<u>ಪಾಟಿ ಸವಾಲುಃ ಆರೋಪಿ ಪರ ವಕೀಲರಾದ ಶ್ರೀ ವಿ.ಆರ್.ಎ. ರವರಿಂದ-</u> ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)

ಓದಿ ಹೇಳಲಾಗಿ ಕೇಳಿ ಸರಿ ಇದೆ ಎಂದು ಒಪ್ಪಿದರು.

2 ನೇಯ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಉಡುಪಿ.